# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 910(1136) |
| ಸದಸ್ಯರ ಹೆಸರು | : ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : 18.12.2024 |
| ಉತ್ತರಿಸುವ ಸಚಿವರು | : ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ತುಮಕೂರು ಜಿಲ್ಲೆಯಲ್ಲಿ ಎಷ್ಟು ರೈತ ಕುಟುಂಬಗಳಿಗೆ ಸರ್ಕಾರದಿಂದ ಭೂಮಿ ಹಂಚಿಕೆಯಾಗಿದೆ; (ತಾಲ್ಲೂಕುವಾರು ವಿವರ ನೀಡುವುದು) | ತುಮಕೂರು ಜಿಲ್ಲೆಯಲ್ಲಿ ರೈತ ಕುಟುಂಬಗಳಿಗೆ ಸರ್ಕಾರದಿಂದ ಭೂಮಿ ಹಂಚಿಕೆಯಾದ ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ. |

| ಕ್ರ.ಸಂ | ತಾಲ್ಲೂಕು | ನಮೂನೆ-50 | ನಮೂನೆ-53 | ನಮೂನೆ-57 |
|---|---|---|---|---|
| 1 | ತುಮಕೂರು | 2253 | 897 | 0 |
| 2 | ಗುಬ್ಬಿ | 5907 | 3982 | 0 |
| 3 | ಕುಣಿಗಲ್ | 4107 | 2704 | 0 |
| 4 | ತಿಪಟೂರು | 4349 | 3273 | 3 |
| 5 | ತುರುವೇಕೆರೆ | 7365 | 4435 | 0 |
| 6 | ಚಿ.ನಾ.ಹಳ್ಳಿ | 4386 | 3382 | 0 |
| 7 | ಮಧುಗಿರಿ | 4346 | 683 | 59 |
| 8 | ಕೊರಟಗೆರೆ | 2856 | 901 | 110 |
| 9 | ಶಿರಾ | 8558 | 3476 | 216 |
| 10 | ಪಾವಗಡ | 2623 | 603 | 0 |
| ಒಟ್ಟು | | **46750** | **24336** | **388** |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಸರ್ಕಾರದಿಂದ ಹಂಚಿಕೆಯಾದ ಭೂಮಿ ಪೋಡಿಯಾಗದ ಪ್ರಕರಣಗಳು ಎಷ್ಟು; ಎಷ್ಟು ಭೂಮಿಗಳು ಇಲ್ಲಿಯವರೆಗೆ ಪೋಡಿಯಾಗಿವೆ; (ತಾಲ್ಲೂಕುವಾರು ವಿವರ ನೀಡುವುದು) | ರಾಜ್ಯದಲ್ಲಿ ಸರ್ಕಾರದಿಂದ ಹಂಚಿಕೆಯಾದ ಭೂಮಿ ಪೋಡಿ ಪ್ರಕರಣಗಳಲ್ಲಿ ತ್ವರಿತವಾಗಿ ಕ್ರಮ ಕೈಗೊಳ್ಳಲು 2024-25ನೇ ಸಾಲಿನ ಆಯವ್ಯದಲ್ಲಿ ದರಖಾಸ್ತು ಪೋಡಿ ಆಂದೋಲನ ಮುಖೇನ ಕ್ರಮ ಕೈಗೊಳ್ಳಲು ಘೋಷಣೆಯಾಗಿರುತ್ತದೆ. ಸರ್ಕಾರವು ಆದೇಶ ನಂ:**ಕಂಇ 156 ಎಸ್‌ಎಸ್‌ಎಂ 2024, ದಿನಾಂಕ 25-11-2024** ರನ್ವಯ ಎಲ್ಲಾ ಪ್ರಕರಣಗಳನ್ನು ಆನ್.ಲೈನ್ ವ್ಯಾಪ್ತಿಗೆ ಒಳಪಡಿಸಿ ನಮೂನೆ 1 ರಿಂದ 5 ಮತ್ತು 6 ರಿಂದ 10 ಗಳ ಭರ್ತಿ ಮತ್ತು ದೃಢೀಕರಿಸುವ ಪ್ರಕ್ರಿಯೆಯನ್ನು ಸರಳೀಕರಿಸಿದೆ.<br>ಅದರಂತೆ ನಮೂನೆ 1 ರಿಂದ 5 ಸಿದ್ಧಪಡಿಸುವ ಕಾರ್ಯ ಪ್ರಗತಿಯಲ್ಲಿದೆ. ಈವರಗೆ ತುಮಕೂರು ಜಿಲ್ಲೆಯಲ್ಲಿ ಒಟ್ಟು 170 ಪ್ರಕರಣಗಳಲ್ಲಿ ನಮೂನೆ 1 ರಿಂದ 5 ಭರ್ತಿ ಮಾಡಿ ಅನುಭಂದ-1 ನೀಡಿದ್ದು ಅದರಂತೆ ಅಳತೆ ಕಾರ್ಯ ಪ್ರಾರಂಭಿಸಲಾಗಿದೆ. ಸದರಿ ಪ್ರಕರಣಗಳ ಪೈಕಿ ಎಲ್ಲಾ ಮೂಲ ಮಂಜೂರಿ ದಾಖಲೆಗಳು ಲಭ್ಯವಿರುವ |

| | | |
|---|---|---|
| | | ಪ್ರಕರಣಗಳಲ್ಲಿ ಅಳತೆ ಹಾಗೂ ಪೋಡಿ ಕಾರ್ಯವನ್ನು 30 ದಿನಗಳ ಒಳಗಾಗಿ ಪೂರೈಸಲಾಗುವುದು. |
| ಇ) | ಜಿಲ್ಲೆಯಲ್ಲಿ ಪೋಡಿ ದುರಸ್ತಿಗಾಗಿ ಕಳೆದ ಎರಡು ವರ್ಷಗಳಲ್ಲಿ ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ ಎಷ್ಟು; ದುರಸ್ತಿ ಮಾಡಿದ ಅರ್ಜಿಗಳ ಸಂಖ್ಯೆ ಎಷ್ಟು; (ತಾಲ್ಲೂಕು ವಾರು ವಿವರ ನೀಡುವುದು) | ಸರ್ಕಾರದಿಂದ ಹಂಚಿಕೆ (ಮಂಜೂರಿ)ಯಾದ ಜಮೀನುಗಳ ಪೋಡಿ ಕೋರಿ ಕಳೆದ ಎರಡು ವರ್ಷಗಳಲ್ಲಿ(1-4-2023 ರಿಂದ 30-11-2024) ತುಮಕೂರು ಜಿಲ್ಲೆ ವ್ಯಾಪ್ತಿಯ ಭೂಮಾಪನ ಕಛೇರಿಯಲ್ಲಿ ಸ್ವೀಕೃತವಾಗಿ ಅರ್ಜಿಗಳ ತಾಲ್ಲೂಕುವಾರು ಪ್ರಗತಿ ವಿವರ |

| ತಾಲ್ಲೂಕು | ಪ್ರಾ.ಶಿಲ್ಕು | ಸ್ವೀಕೃತಿ | ಒಟ್ಟು | ವಿಲೆ | ಬಾಕಿ |
|---|---|---|---|---|---|
| ಪಾವಗಡ | 0 | 0 | 0 | 0 | 0 |
| ಕುಣಿಗಲ್ | 10 | 2 | 12 | 4 | 8 |
| ಸಿರಾ | 3 | 5 | 8 | 4 | 4 |
| ಕೊರಟಗೆರೆ | 2 | 1 | 3 | 3 | 0 |
| ತಿಪಟೂರು | 3 | 2 | 5 | 2 | 3 |
| ತುಮಕೂರು | 0 | 4 | 4 | 4 | 0 |
| ತುರುವೇಕೆರೆ | 0 | 0 | 0 | 0 | 0 |
| ಚಿಕ್ಕನಾಯಕನಹಳ್ಳಿ | 0 | 4 | 4 | 3 | 1 |
| ಮಧುಗಿರಿ | 0 | 1 | 1 | 0 | 1 |
| ಗುಬ್ಬಿ | 0 | 13 | 13 | 12 | 1 |
| **ಒಟ್ಟು** | **18** | **32** | **50** | **32** | **18** |

| | | |
|---|---|---|
| ಈ) | ಸರ್ಕಾರದ ವತಿಯಿಂದ ಜಿಲ್ಲೆಯಲ್ಲಿ ಪೋಡಿ ದುರಸ್ತಿ ಅಭಿಯಾನವನ್ನು ಯಾವಾಗ ಪ್ರಾರಂಭಿಸಲಾಗುವುದು; ಯಾವ ಕಾಲಮಿತಿಯಲ್ಲಿ ಪೂರ್ಣ ಗೊಳಿಸಲಾಗುವುದು; | ಈಗಾಗಲೇ 2024-25ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ದರಖಾಸ್ತು ಪೋಡಿ ಆಂದೋಲನವನ್ನು ಪ್ರಾರಂಭಿಸಿದೆ. ಸರ್ಕಾರದ ಆದೇಶ ನಂ:**ಕಂಇ 156 ಎಸ್‌ಎಸ್‌ಎಂ 2024, ದಿನಾಂಕ 25-11-2024** ರನ್ವಯ ತುಮಕೂರು ಜಿಲ್ಲೆಯಲ್ಲಿ ಒಟ್ಟು 170 ಪ್ರಕರಣಗಳಲ್ಲಿ ನಮೂನೆ 1 ರಿಂದ 5 ಭರ್ತಿ ಮಾಡಿ ಅನುಭಂದ-1 ನೀಡಿದ್ದು, ಅದರಂತೆ ಅಳತೆ ಕಾರ್ಯ ಪ್ರಾರಂಭಿಸಲಾಗಿದೆ. ಸದರಿ ಪ್ರಕರಣಗಳಲ್ಲಿ ನಿಯಮಾನುಸಾರ 30 ದಿನಗಳ ಒಳಗಾಗಿ ಅಳತೆ ಕಾರ್ಯ ಪೂರೈಸಲಾಗುವುದು. |
| ಉ) | ಮಂಜೂರಾದ ಭೂಮಿಯ ದಾಖಲೆಯ ವಿಸ್ತೀರ್ಣ ಮತ್ತು ಅನುಭವದಲ್ಲಿನ ವಿಸ್ತೀರ್ಣಕ್ಕೂ ವ್ಯತ್ಯಾಸವಿದ್ದಲ್ಲಿ ಯಾವ ಅಳತೆಯನ್ನು ಪರಿಗಣಿಸಲಾಗುವುದು; | ಮಂಜೂರಾದ ಭೂಮಿಯ ದಾಖಲೆಯ(ಮಂಜೂರಿ) ವಿಸ್ತೀರ್ಣ ಕ್ಕಿಂತ ಅನುಭವದ ವಿಸ್ತೀರ್ಣ ಕಡಿಮೆಯಿರುವ ಪ್ರಕರಣಗಳಲ್ಲಿ ಅನುಭವದ ವಿಸ್ತೀರ್ಣದ ವಿಸ್ತೀರ್ಣಕ್ಕೆ ಸೀಮಿತಗೊಳಿಸಿ ಪೋಡಿ ದುರಸ್ಥಿಪಡಿಸಲಾಗುವುದು. ಮತ್ತು ಒಂದು ವೇಳೆ ದಾಖಲೆಯ (ಮಂಜೂರಿ) ವಿಸ್ತೀರ್ಣ ಮತ್ತು ಅನುಭವದಲ್ಲಿನ ವಿಸ್ತೀರ್ಣಕ್ಕಿಂತ ಹೆಚ್ಚಾಗಿದ್ದಲ್ಲಿ ಇಲಾಖೆ ಸುತ್ತೋಲೆ No.TNL.ADM-3/1976-7, Dated:25-4-1977 ರನ್ವಯ ಮಂಜೂರಿ ವಿಸ್ತೀರ್ಣಕ್ಕೆ ನಿಗಧಿಪಡಿಸಿ ಪೋಡಿ ದುರಸ್ಥಿಪಡಿಸಲಾಗುವುದು. |

| | | |
|---|---|---|
| ಊ) | ಭೂ ಮಂಜೂರಾತಿ ಸಮಯದಲ್ಲಿ ನಕ್ಷೆಯಲ್ಲಿ ತೋರಿಸಿದ ಸ್ಥಳ ಮತ್ತು ಪ್ರಸ್ತುತ ಅನುಭವದಲ್ಲಿನ ಜಮೀನಿನ ಸ್ಥಳದಲ್ಲಿ ವ್ಯತ್ಯಾಸವಿದ್ದಲ್ಲಿ ಯಾವುದನ್ನು ಪರಿಗಣಿಸಲಾಗುವುದು: ಇದರ ಮಾರ್ಗ ಸೂಚಿಗಳೇನು? | ಮಂಜೂರಾದ ಭೂಮಿಯ ಮಂಜೂರಿ ನಕ್ಷೆಯಲ್ಲಿ ತೋರಿಸಿದ ಸ್ಥಳ ಮತ್ತು ಅನುಭವದಲ್ಲಿನ ಸ್ಥಳಕ್ಕೂ ವ್ಯತ್ಯಾಸವಿದ್ದಲ್ಲಿ ಸರ್ಕಾರದ ಸುತ್ತೋಲೆ No.RD.93.LGP.79, Date.20-3-1980ರ ಸೂಚನೆ ಗಳನ್ವಯ ಸ್ಥಳ ಬದಲಾವಣೆ ಎಂದು ಪ್ರಕರಣವನ್ನು ತಹಶೀಲ್ದಾರರಿಗೆ ರವಾನಿಸಿ, ತಹಶೀಲ್ದಾರರು ಸ್ಥಳ ತನಿಖೆ ಮಾಡಿ ಖಾತರಿ ಪಡಿಸಿಕೊಂಡು ಅನುಮೋದನೆಯೊಂದಿಗೆ ಪರಿಷ್ಕೃತ ಮಂಜೂರಿ ನಕ್ಷೆ ನೀಡಿದ ನಂತರ ಪರಿಷ್ಕೃತ ಮಂಜೂರಿ ನಕ್ಷೆಯಂತೆ ಪೋಡಿ ದುರಸ್ಥಿ ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ: ಆರ್‌ಡಿ 108 ಎಲ್‌ಜಿಟಿ 2024

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು